೬೫೦

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 436 (599) |
| ಸದಸ್ಯರ ಹೆಸರು | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 11.12.2025 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುತ್ತಿರುವ ಪರೀಕ್ಷೆಗಳಲ್ಲಿ ಲೋಪದೋಷ/ಗೊಂದಲಗಳು, ಅವಾಂತರಗಳು ಸೃಷ್ಟಿಯಾಗಿ, ರಾಜ್ಯಾದ್ಯಂತ ಅಭ್ಯರ್ಥಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಲೋಕಸೇವಾ ಆಯೋಗದಿಂದ ವಿವಿಧ ಹುದ್ದೆಗಳ ನೇಮಕಾತಿ ಸಂಬಂಧ ಅಧಿಸೂಚಿಸಲಾದ ವಿವಿಧ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಾವುದೇ ಲೋಪದೋಷಗಳಿಲ್ಲದೆ ಸುಲಲಿತವಾಗಿ ನಡೆಸಲಾಗಿರುತ್ತದೆ.<br><br>ದಿನಾಂಕ:27-08-2024ರಂದು ನಡೆದ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಪರೀಕ್ಷೆ ಹಾಗೂ ದಿನಾಂಕ:29-12-2024ರಂದು ನಡೆದ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಮರು ಪರೀಕ್ಷೆಗೆ ಮಾತ್ರ ಪರೀಕ್ಷಾರ್ಥಿಗಳಿಗೆ ಗೊಂದಲ ಉಂಟಾಗಿರುವುದಾಗಿ ಅಭ್ಯರ್ಥಿಗಳು ಹಾಗೂ ಸಂಘ/ಸಂಸ್ಥೆಗಳು ಮನವಿ ಸಲ್ಲಿಸಿರುತ್ತಾರೆ.<br><br>ಈ ಸಂಬಂಧ ಅಭ್ಯರ್ಥಿಗಳಿಂದ ಸ್ವೀಕೃತವಾದ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಉತ್ತಮ ಕನ್ನಡ ಭಾಷಾ ಜ್ಞಾನವನ್ನು ಹೊಂದಿರುವ ಹಾಗೂ ಆಯಾ ವಿಷಯಗಳಲ್ಲಿ ಪರಿಣತಿ ಹೊಂದಿರುವಂತಹ ಮೂವರು ವಿಷಯ ತಜ್ಞರುಗಳ ಸಮಿತಿಗಳನ್ನು ರಚಿಸಿ ಅಭಿಪ್ರಾಯವನ್ನು ಪಡೆಯಲಾಗಿದ್ದು, ಭಾಷಾಂತರ ಮತ್ತು ತಾಂತ್ರಿಕ ದೋಷದಿಂದಾಗಿ ಕೆಲವು ಪ್ರಶ್ನೆಗಳಿಗೆ ಕೃಪಾಂಕ ಹಾಗೂ ಕೆಲವು ಪ್ರಶ್ನೆಯ ಕೀ-ಉತ್ತರವನ್ನು ಪರಿಷ್ಕರಿಸಬೇಕೆಂದು, ಕೆಲವು ಪ್ರಶ್ನೆಗಳಲ್ಲಿ ವ್ಯತ್ಯಾಸವಿದ್ದರೂ ಸಹ ಪ್ರಶ್ನೆಯನ್ನು ಅರ್ಥೈಸಿಕೊಳ್ಳಬಹುದೆಂದು, ಕೆಲವು ಪ್ರಶ್ನೆಗಳಲ್ಲಿ ಕಾಗುಣಿತಾಕ್ಷರಗಳ ಮುದ್ರಣ ದೋಷವಾಗಿರುವುದಾಗಿಯೂ ಹಾಗೂ ಇನ್ನುಳಿದ ಪ್ರಶ್ನೆಗಳಲ್ಲಿ ಯಾವುದೇ ಭಾಷಾಂತರ ವ್ಯತ್ಯಾಸವಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.<br><br>ಆಯೋಗವು ನಡೆಸುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವ ವಿಷಯ ತಜ್ಞರುಗಳು ಆಂಗ್ಲ ಭಾಷೆಯಲ್ಲಿ ಪರಿಣಿತಿ ಹೊಂದಿರುತ್ತಾರೆ ಹಾಗೂ ಕನ್ನಡದಲ್ಲಿ ಹೆಚ್ಚಿನ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಪುಸ್ತಕಗಳು ಲಭ್ಯವಿಲ್ಲದಿರುವುದರಿದ ಮತ್ತು ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ತಾಂತ್ರಿಕ ಮತ್ತು ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಬೋಧನೆ ಮಾಡದೇ ಇರುವುದರಿಂದ ಪ್ರಶ್ನೆ ಪತ್ರಿಕೆಯನ್ನು |
| ಆ | ಬಂದಿದ್ದಲ್ಲಿ, ಸದರಿ ಪರೀಕ್ಷೆಗಳಲ್ಲಿನ ಲೋಪದೋಷಗಳು ಮರುಕಳಿಸುತ್ತಿರಲು ಇರುವ ದೋಷಗಳಾದರೂ ಯಾವುವು; (ವಿವರ ನೀಡುವುದು) | |
| ಇ | ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ಈ ರೀತಿಯ ಲೋಪದೋಷಗಳು ಕಂಡುಬರಲು ಕಾರಣಗಳೇನು; (ವಿವರ ನೀಡುವುದು) | |

| | | |
|---|---|---|
| | | ಕನ್ನಡದಲ್ಲಿ ಮಾಡಿಕೊಡಲು ಕಡ್ಡಾಯಗೊಳಿಸಿದ್ದಲ್ಲಿ ವಿಷಯ ತಜ್ಞರು ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಲು ಒಪ್ಪುವುದಿಲ್ಲ. ಆದ್ದರಿಂದ ಕೆಲವೊಂದು ಪ್ರಶ್ನೆಗಳನ್ನು ನುರಿತ ಭಾಷಾಂತರಕಾರರನ್ನು ನಿಯೋಜಿಸಿ ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸಲಾಗಿರುತ್ತದೆ. ಇದು ಅತ್ಯಂತ ಗೋಪ್ಯ ಸ್ವರೂಪದ ಕಾರ್ಯವಾಗಿರುವುದರಿಂದ ಇದನ್ನು ಸಂಬಂಧಪಟ್ಟ ವಿಷಯ ತಜ್ಞರು ಅಂತಿಮಗೊಳಿಸಿದ ನಂತರ, ಭಾಷಾಂತರಕಾರರು ಭಾಷಾಂತರ ಮಾಡಿದನಂತರ ಪ್ರಶ್ನೆಗಳ ಗೋಪ್ಯತೆಯನ್ನು ಕಾಪಾಡುವ ದೃಷ್ಟಿಯಿಂದ ಪ್ರಶ್ನೆಗಳ ಭಾಷಾಂತರವನ್ನು ಮತ್ತೊಮ್ಮೆ ಪರಿಶೀಲಿಸಲಾಗುವುದಿಲ್ಲ. |
| ಈ | ಈ ರೀತಿಯ ಘಟನಾವಳಿಗಳನ್ನು ತಪ್ಪಿಸಿ ವಿದ್ಯಾರ್ಥಿಗಳಿಗೆ ನೆರವಾಗಲು ಸರ್ಕಾರ ತೆಗೆದುಕೊಂಡ ಅಗತ್ಯ ಕ್ರಮಗಳಾವುವು? | ಪ್ರಶ್ನೆಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಸಿದ್ಧಪಡಿಸಿ ನೀಡುವಂತೆ ವಿಷಯ ತಜ್ಞರುಗಳನ್ನು ಕೋರಲಾಗುತ್ತಿದ್ದು, ಕೇವಲ ಆಂಗ್ಲ ಭಾಷೆಯಲ್ಲಿ ಮಾತ್ರ ಸಿದ್ಧಪಡಿಸಿ ನೀಡುವಂತಹ ಪ್ರಶ್ನೆಗಳನ್ನು ನುರಿತ ಭಾಷಾಂತರಕಾರರಿಂದ ಭಾಷಾಂತರಿಸ ಲಾಗುತ್ತಿದ್ದು, ಭಾಷಾಂತರಿಸಲಾದ ಪ್ರಶ್ನೆಗಳನ್ನು ಭಾಷಾಂತರ ಇಲಾಖೆಯ ಅಧಿಕಾರಿಯವರಿಂದ ಅಥವಾ ಸಂಬಂಧಪಟ್ಟ ವಿಷಯದ ವಿಷಯ ತಜ್ಞರುಗಳಿಂದ ಪರಿಶೀಲಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಸಿಆಸುಇ 160 ಎಸ್‌ಎಸ್‌ಸಿ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ